635(602) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯ್ಕ (ಹುಕ್ಕೇರಿ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಹುಕ್ಕೇರಿ ಕ್ಷೇತ್ರದಲ್ಲಿ ಕೊಟಬಾಗಿ, ರುಸ್ತುಮಾಪೂರ, ದಡ್ಡಿನಾಗನೂರ ಏತ ನೀರಾವರಿಗಳು ಯಾವ ಸಾಲಿನಲ್ಲಿ ಮಂಜೂರಾಗಿರುವುದು; ಮತ್ತು ಒಂದನೇ ಹಂತದ ಕೆಲಸ ಮುಗಿದಿದೆಯೇ; ಹಾಗೂ ಎರಡನೇ ಹಂತದ ಕೆಲಸ ಯಾವಾಗ ಪ್ರಾರಂಭ ಮಾಡಿ ಮುಗಿಸುವಿರಿ; ಮತ್ತು ಇವುಗಳ ವೆಚ್ಚ ಎಷ್ಟು;

ಆ) ಚಿಕ್ಕೋಡಿ ಹೈಲೆವೆಲ್ ಕೆನಾಲ ಮತ್ತು ಕುರಣಿ ಏತ ನೀರಾವರಿ ಕೆನಾಲ, ಹರಿ ಕಾಲುವೆ, ಕೋಚರಿ ಏತ ನೀರಾವರಿ ಮತ್ತು ಹರಿ ಕಾಲುವೆ ಕೆಲಸ ಮುಗಿದು ಎಷ್ಟು ವರ್ಷಗಳಾಗಿದೆ; ಮತ್ತು ಸರಿಯಾಗಿ ಗದ್ದೆಗಳಿಗೆ ನೀರು ಒದಗುತ್ತಿದೆಯೇ; ಇದಕ್ಕೆ ಖರ್ಚು ಮಾಡಿರುವ ಹಣ ಎಷ್ಟು; (ವಿವರ ನೀಡುವುದು)

ಇ) ಈ ಕಾಲುವೆಗಳ ಹಾಗೂ ಏತ ನೀರಾವರಿಗಳ ಎಷ್ಟು ವರ್ಷದ ಉಪಯೋಗಕ್ಕೆ ಎಂದು ಪ್ರಾರಂಭ ಮಾಡಿದದ್ದು ಕಾಲುವೆವಾರು ಹಾಗೂ ಏತ ನೀರಾವರಿವಾರು ವಿವರ ನೀಡುವುದು;

ಈ) ಈ ಕಾಲುವೆಗಳು ಹಾಗೂ ಏತ ನೀರಾವರಿಗಳು ; ಉಪಯೋಗಕ್ಕೆ ಬಾರದ ರೀತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲ ಸಂಪನ್ಮೂಲ ಹಾ ಸಚಿವರು)

ಅ) ಹುಕ್ಕೇರಿ ಕ್ಷೇತ್ರದಲ್ಲಿರುವ ಕೊಟಬಾಗಿ, ರುಸ್ತುಂಪುರ ಮತ್ತು ದಡ್ಡಿನಾಗನೂರ ಏತ ನೀರಾವರಿ ಯೋಜನೆಗಳು 1991–92ನೇ ಸಾಲಿನಲ್ಲಿ ಮಂಜೂರಾಗಿರುತ್ತವೆ.

ರುಸ್ತುಂಪುರ ಮತ್ತು ದಡ್ಡಿನಾಗನೂರ ಏತ ನೀರಾವರಿ ಯೋಜನೆಗಳ 1ನೇ ಹಂತದ ಹೆಡ್‌ವರ್ಕ್ಸ್ ಕಾಮಗಾರಿಗಳು ಮುಗಿದಿರುತ್ತವೆ ಹಾಗೂ ಕಾಲುವೆ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿವೆ.

ಕೊಟಬಾಗಿ ಏತ ನೀರಾವರಿ ಯೋಜನೆಯ 1ನೇ ಹಂತದ ಜಾಕ್‌ವೆಲ್ ಕೆಲಸ ಪೂರ್ಣಗೊಂಡಿದೆ. 1ನೇ ಹಂತದ ಕಾಲುವೆ ಕೆಲಸಗಳು ಪೂರ್ಣಗೊಂಡಿವೆ.

ಕೊಟಬಾಗಿ ಏತ ನೀರಾವರಿ ಯೋಜನೆಯ 1ನೇ ಹಂತದಲ್ಲಿ ಬಾಕಿ ಇರುವ ಪಂಪಹೌಸ್ ಡೆಲಿವರಿ ಚೇಂಬರ್ ಮತ್ತು 2ನೇ ಹಂತದ ಹೆಡ್‌ವರ್ಕ್ಸ್ ಕಾಮಗಾರಿಗಳು ಪ್ರಗತಿಯಲ್ಲಿವೆ. ಹಾಗೂ 2ನೇ ಹಂತದ ಕಾಲುವೆಗಳ ಸರ್ವೆ ಕೆಲಸ ಮುಗಿದಿದ್ದು, ಅಂದಾಜು ಪಟ್ಟಿಗಳನ್ನು ತಯಾರಿಸಲಗುತ್ತಿದೆ.

ರುಸ್ತುಂಪುರ, ದಡ್ಡಿನಾಗನೂರ ಮತ್ತು ಕೊಟಬಾಗಿ ಏತ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ 2ನೇ ಹಂತದ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ಕೈಗೊಂಡಿದ್ದು, ಸದರಿ ಯೋಜನೆಗಳನ್ನು ಡಿಸೆಂಬರ್ 2005ರ ಅಂತ್ಯದೊಳಗೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ರುಸ್ತುಂಪುರ, ದಡ್ಡಿನಾಗನೂರ ಮತ್ತು ಕೊಟಬಾಗಿ ಏತ ನೀರಾವರಿ ಯೋಜನೆಗಳಿಗೆ ಜೂನ್ 2004ರವರೆಗೆ ಆಗಿರುವ ಒಟ್ಟು ವೆಚ್ಚ ಅನುಕ್ರಮವಾಗಿ ರೂ. 561.33 ಲಕ್ಷ ರೂ. 425.32 ಲಕ್ಷ ಮತ್ತು ರೂ. 669.91 ಲಕ್ಷ.

ಆ) 1. ಚಿಕ್ಕೋಡಿ ಹೈ ಲೆವಲ್ ಕೆನಾಲ್ ಎಂಬ ಕಾಲುವೆ ಇರುವುದಿಲ್ಲ.

2. ಕುರ್ಣಿ 1ನೇ ಹಂತದ ಏತ ನೀರಾವರಿ ಮತ್ತು ಹರಿಕಾಲುವೆಯ ಕಾಮಗಾರಿಗಳು 1985–86ರಲ್ಲಿ ಪೂರ್ಣಗೊಂಡಿವೆ. ಕುರ್ಣಿ 2 ಹಾಗೂ 3ನೇ ಹಂತದ ಕಾಮಗಾರಿಗಳು 1995–96ರಲ್ಲಿ ಪೂರ್ಣಗೊಂಡಿವೆ. ಹರಿ ಕಾಲುವೆಗೆ ಸಮರ್ಪಕವಾಗಿ ನೀರು ಪೂರೈಸಲಾಗುತ್ತಿದೆ. ಕೊಚರಿ ಹರಿ ನೀರಾವರಿ ಯೋಜನೆ ಮತ್ತು ಏತ ನೀರಾವರಿ ಯೋಜನೆಗಳು 1986ರಲ್ಲಿ ಪೂರ್ಣಗೊಂಡಿವೆ. ಹರಿ ನೀರಾವರಿಯಲ್ಲಿ ನೀರನ್ನು ಸಮರ್ಪಕವಾಗಿ ಪೂರೈಸಲಾಗುತ್ತಿದೆ. ಏತ ನೀರಾವರಿಗೆ ಒಳಪಡುವ ಕ್ಷೇತ್ರಕ್ಕೆ ವಿದ್ಯುತ್ ಸರಬರಾಜು ಅವಲಂಭಿಸಿ ಸಮರ್ಪಕವಾಗಿ ನೀರು ಬಿಡಲಾಗುತ್ತಿದೆ.

ಕುರ್ಣಿ 1, 2 ಹಾಗೂ 3ನೇ ಹಂತದ ಏತ ನೀರಾವರಿಗಳಿಗೆ ಆಗಿರುವ ಒಟ್ಟು ವೆಚ್ಚ ರೂ.677.65 ಲಕ್ಷಗಳು. ಕೊಚರಿ ಯೋಜನೆಗೆ ಆಗಿರುವ ಒಟ್ಟು ವೆಚ ರೂ. 783.10 ಲಕ್ಷಗಳು.

ಇ) ಮೇಲ್ಕಂಡ ಏತ ನೀರಾವರಿ ಯೋಜನೆಗಳ ಪಂಪ್‌ಸೆಟ್ಟುಗಳ ಬಾಳಿಕೆ 12 ವರ್ಷವೆಂದು ಮುಖ್ಯ ಇಂಜಿನಿಯರರು, ಯಾಂತ್ರಿಕ ಸಂಸ್ಥೆ, ಬೆಂಗಳೂರು ಇವರ ಸುತ್ತೋಲೆ ಪ್ರಕಾರ ಅಳವಡಿಸಲಾಗಿದೆ.

ಸದರಿ ಕಾಲುವೆಗಳಿಗೆ ರೈತರು ಹಾನಿ ಮಾಡದೆ ಸಮರ್ಪಕವಾಗಿ ಉಪಯೋಗಿಸಿದರೆ ಹಾಗೂ ಸರಿಯಾಗಿ ನಿರ್ವಹಿಸಿದಾಗ ಸುಮಾರು 50 ವರ್ಷಗಳವರೆಗೆ ಬಾಳಿಕೆ ಬರುತ್ತವೆ.

ಈ) 1. ಕುರ್ಣಿ ನೀರಾವರಿ ಹರಿಗಾಲುವೆ, ಕುರ್ಣಿ 1 ಮತ್ತು 2ನೇ ಹಂತದ ಏತ ನೀರಾವರಿ ಯೋಜನೆಗಳಡಿ ನೀರನ್ನು ಕಾಲುವೆಗಳ ಮುಖಾಂತರ ಹರಿಸಲಾಗುತ್ತಿದ್ದು, ಅಧಿಸೂಚಿತ ಕ್ಷೇತ್ರಗಳಿಗೆ ನೀರನ್ನು ಪೂರೈಸಲಾಗುತ್ತಿದ್ದು, ರಾಷ್ಟ್ರೀಯ ಹೆದ್ದಾರಿ 4ರ ಕೆಲಸವು ಪ್ರಗತಿಯಲ್ಲಿದ್ದುದರಿಂದ ಏತ ನೀರಾವರಿ ಕಾಲುವೆ ಕಿ.ಮೀ. 28 ಮತ್ತು 2ನೇ ಹಂತದ ಕಿ.ಮೀ. ನಂ. 6, 7, 9 ಮತ್ತು 10ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನು ಕ್ರಾಸ್ ಮಾಡುತ್ತಿದ್ದು ರಾಷ್ಟ್ರೀಯ ಹೆದ್ದಾರಿಯ ಎಡ ಮತ್ತು ಬಲ ಭಾಗಗಳಲ್ಲಿ ಹಂಚು ಕಾಲುವೆ ಮತ್ತು ಲ್ಯಾಟರಲ್ಸ್ ಹಾನಿಗೀಡಾಗಿದ್ದು, ಪೂರ್ಣ ಪ್ರಮಾಣದಲ್ಲಿ ನೀರನ್ನು ಪೂರೈಸಲಾಗಿರಲಿಲ್ಲ.

ರಾಷ್ಟ್ರೀಯ ಹೆದ್ದಾರಿಯ ಕಾಮಗಾರಿಯು ಈಗ ಮುಗಿಯುವ ಹಂತದಲ್ಲಿದ್ದು, ಕೆನಾಲಗಳನ್ನು ಪುನರ್ ನಿರ್ಮಿಸಿ ಜಮೀನುಗಳಿಗೆ ನೀರನ್ನು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

2. ಕೋಚರಿ ಹರಿ ಕಾಲುವೆಯಿಂದ 480 ಹೆಕ್ಟೇರಿಗೆ ಅಧಿಸೂಚನೆ ಹೊರಡಿಸಿದ್ದು 400 ಹೆ. ಜಮೀನುಗಳಿಗೆ ನೀರನ್ನು ಪೂರೈಸಲಾಗುತ್ತಿದೆ. ಈ ಕಾಲುವೆಯ ಒಟ್ಟು ಉದ್ದ 20 ಕಿ.ಮೀ. ಇದ್ದು, 12 ಕಿ.ಮೀ. ವರೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಉಳಿದ 8 ಕಿ.ಮೀ. ಗಳಲ್ಲಿ ಹೊಲಗಾಲುವೆ ನಿರ್ಮಿಸಲು ರೈತರು ಅಡ್ಡಿಪಡಿಸಿದ್ದು, ಇದರಿಂದಾಗಿ ಪೂರ್ಣ ಅಚ್ಚುಕಟ್ಟು ಪ್ರದೇಶಕ್ಕೆ ನೀರು ಪೂರೈಸಲು ತೊಂದರೆಯಾಗಿರುತ್ತದೆ. ಇದನ್ನು ಸರಿಪಡಿಸಿ ನೀರು ಪೂರೈಸಲು ತ್ವರಿತ ಕ್ರಮ ಕೈಗೊಳ್ಳಲಾಗುತ್ತಿದೆ.

05(1) : ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸ್ತ್ರೀಶಕ್ತಿ ಗ್ರಾಮೀಣ ಬ್ಯಾಂಕ್ ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆ;

ಆ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆಯಾಗುವುದು?

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

76(290) ಶ್ರೀ ರಾಮರೆಡ್ಡಿ ಜಿ.ವಿ. (ಬಾಗೇಪಲ್ಲಿ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗಬೇ ಇರುವ ಪ್ರಕರಣಗಳ ಸಂಖ್ಯೆ ಎಷ್ಟು. (ಸಿವಿಲ್ ಮತ್ತು ಕ್ರಿಮಿನಲ್ ಪ್ರತ್ಯೇಕವಾಗಿ)

ಶ್ರೀ ಧರ್ಮಸಿಂಗ್ (ಮಾನ್ಯ ಮುಖ್ಯಮಂತ್ರಿಗಳು)

ಅ) ದಿನಾಂಕ 1-6-2004ರ ಅಂತ್ಯಕ್ಕೆ ರಾಜ್ಯದ ಅಧೀನ ನ್ಯಾಯಾಲಯಗಳಲ್ಲಿ 10,55,56 ಪ್ರಕರಣಗಳು ಬಾಕಿ ಇವೆ.

ಸಿವಿಲ್ ಪ್ರಕರಣಗಳು ಕ್ರಮಿನಲ್ –

ಪ್ರಕರಣಗಳು –

394 (247) : ಶ್ರೀ ಸಿ.ಟಿ. ರವಿ (ಚಿಕ್ಕಮಗಳೂರು) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ಸರ್ಕಾರಿ ಶಾಲೆಗಳ ಪೈಕಿ ಹಾಲಿ ಮುಚ್ಚಲ್ಪಟ್ಟಿರುವಂತಹ ಶಾಲೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ವಿವರ ನೀಡುವುದು)

ಆ) ಇದರಿ ಶಾಲೆಗಳನ್ನು ಮುಚ್ಚಲು ಕಾರಣಗಳೇನು;

ಇ) ಶಾಲೆಗೆ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿರುವ ಅಥವಾ ಕಟ್ಟಡದ ದುರಸ್ತಿ ಕಾರಣದಿಂದ ಮುಚ್ಚಲ್ಪಟ್ಟಿದೆಯೇ;

ಈ) ಈ ರೀತಿಯ ಶಾಲೆಗಳು ಚಿಕ್ಕಮಗಳೂರಿನಲ್ಲಿ ಎಷ್ಟಿವೆ ಹಾಗೂ ಅವುಗಳನ್ನು ಪುನರ್ ತೆರೆಯಲು ಸರ್ಕಾರ ಯಾವ ಕ್ರಮ ಕೈಗೊಳ್ಳುವುದು? (ವಿವರ ಒದಗಿಸುವುದು)

111-101